ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.**314/2018**

| | | | |
|---|---|---|---|
| ಹೆಸರು | : | ಎಸ್ ಕೆ ಮೊಹಮ್ಮದ್ ನಯೀಂ | |
| ತಂದೆ ಹೆಸರು | : | ಲೇಟ್ ಬಿ ಅಬ್ದುಲ್ ಕರೀಂ | ಪಿ .ಡಬ್ಲ್ಯೂ :1 |
| ವಯಸ್ಸು | : | 58 ವರ್ಷ | |
| ಉದ್ಯೋಗ | : | ASI ಗುಬ್ಬಿ | |
| ವಾಸಸ್ಥಳ | : | ಗುಬ್ಬಿ | |

ಸಾಕ್ಷಿಯನ್ನು ದಿಃ 07-08-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಕಲಂ **299** ಸಿ ಆರ್ ಪಿ ಸಿ ರಡಿಯಲ್ಲಿ ಸಾಕ್ಷಿಯು ಮುಂದುವರೆದ ವಿಚಾರಣೆ **ಸಹಾಯಕ ಸರಕಾರಿ ಅಭಿಯೋಜಕರಿಂದಃ**

2022 ನೇ ಸಾಲಿನಿಂದ ಇಲ್ಲಿಯವರೆಗೆ ಗುಬ್ಬಿ ಪೊಲೀಸ್ ಠಾಣೆಯಲ್ಲಿ ASI ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ .

ದಿಃ 25-03-2025 ರಂದು ಈ ನ್ಯಾಯಾಲಯವು ಮಾಡಿದ್ದ ಆದೇಶದ ಪ್ರಕಾರ ದಿಃ 08-04-2025 ರಂದು ಆರೋಪಿತರ ಊರಾದ ಕುಣಿಗಲ್ ತಾಲ್ಲೂಕಿನ ಮಡಿಕೆಹಳ್ಳಿ ಗ್ರಾಮಕ್ಕೆ ಹೋಗಿ ಈತನ ಪತ್ತೆಯ ಬಗ್ಗೆ ವಿಚಾರ ಮಾಡಲಾಗಿ ಆತನ ಬಗ್ಗೆ ಯಾವುದೇ ಸುಳಿವು ಸಿಕ್ಕಿರುವುದಿಲ್ಲ . ಅವರು 7-8 ವರ್ಷಗಳ ಹಿಂದೆ ಮನೆ ಬಿಟ್ಟು ಹೋಗಿರುತ್ತಾರೆ ಎಂಬ ಮಾಹಿತಿ ಲಭ್ಯವಾಗಿದ್ದು ನಂತರ ಪಂಚಾಯಿತಿದಾರರಾದ ಜಮೀರ್ ಮತ್ತು ಪರ್ಹಾನ ಬೇಗಂ ರವರ ಸಮಕ್ಷಮ ಬೆಳಗ್ಗೆ 10.00 ರಿಂದ 11.00 ಗಂಟೆಯವರೆಗೆ ಆರೋಪಿತರ ಮನೆಯ ಮುಂಭಾಗದಲ್ಲಿ ಉದ್ಘೋಷಣಾ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ ಮತ್ತು ಛಾಯಾ ಚಿತ್ರಗಳನ್ನು ತೆಗೆಸಿದ್ದೇನೆ . ಅದೇ ದಿನ ಮಧ್ಯಾಹ್ನ 12.00 ರಿಂದ 1.00 ಗಂಟೆಯವರೆಗೆ ಚಂದ್ರಯ್ಯ ಮತ್ತು ಶಿವಣ್ಣ ರವರ ಸಮಕ್ಷಮ ಗ್ರಾಮ ಪಂಚಾಯಿತಿ ಮುಂಭಾಗದಲ್ಲಿ ಪಂಚನಾಮೆ ಕ್ರಮ ಜರುಗಿಸಿರುತ್ತೇನೆ. ನಂತರ ಆರೋಪಿತರ ಚರ ಮತ್ತು ಸ್ಥಿರ ಸ್ವತ್ತುಗಳ ಬಗ್ಗೆ ವಿವರಗಳನ್ನು ಕೇಳಿ PDO ಗ್ರಾಮ ಪಂಚಾಯಿತಿ ರವರಿಗೆ ಮನವಿ ಸಲ್ಲಿಸಿರುತ್ತೇನೆ .

ದಿಃ 06-07-2025 ರಂದು ಮಡಿಕೇಹಳ್ಳಿ ಗ್ರಾಮ ಪಂಚಾಯಿತಿ ಕಾರ್ಯಾಲಯದವರಿಂದ ವರದಿ ಪಡೆದಿರುತ್ತೇನೆ . ಆ ವರದಿಯಲ್ಲಿ ಆರೋಪಿತರಿಗೆ ಸೇರಿದ ಯಾವುದೇ ಸ್ಥಿರ ಮತ್ತು ಚಾರಾಸ್ಥಿಗಳು ಲಭ್ಯವಿಲ್ಲವೆಂದು ಅವರುಗಳು ಮಾಹಿತಿ ನೀಡಿರುತ್ತಾರೆ .

ಉದ್ಘೋಷಣೆ ಮಾಡಿ ಸಲ್ಲಿಸಲಾಗಿರುವ ಎರಡು ವರದಿಗಳು , ಪಂಚಾಯಿತಿಯವರು ನೀಡಿರುವ ವರದಿಯನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ನಿಪಿ -1 ರಿಂದ 3 ಎಂದು ಗುರುತಿಸಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
**(ಅನುಪಮ.ಡಿ )**
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.